INDIAN JOURNAL OF HISTORY AND ARCHAEOLOGY
ISSN (e):2582-225X
Vol-4, Issue -1, May-June, 2022,
PageNo,67-74
Peer Reviewed Journal, Referred Journal

# ಪಶ್ಚಿಮ ಏಷ್ಯಾದ ಯಹೂದಿ ಕಾಲದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಜೀವನ

ಡಾ. ಶಿವಾನಂದ[1]

ಕ್ರಿಸ್ತನ ಕಾಲದಲ್ಲಿ ಯಹೂದಿ ಸಮುದಾಯವು ಏಕರೂಪವಾಗಿರಲಿಲ್ಲ ಹಾಗೂ ಇಸ್ಲಾಂ ಧರ್ಮದ ಆರಂಭಿಕ ಕಾಲದಲ್ಲಿಯೂ ಕೂಡ ಈ ಯಹೂದಿಗಳಲ್ಲಿ ಏಕರೂಪತೆಯ ಕೊರತೆ ಇತ್ತು. ಆವಾಗ ನಡೆಯುತ್ತಿದ್ದ ಹೊಸ ಪ್ರಾದೇಶಿಕತೆಯ ರಾಜ್ಯಗಳ ಪರಿಧಿಯಲ್ಲಿ ಪ್ಯಾಲೆಸ್ತೇನ್ ಕೂಡ ಒಂದು. ಕೆಲವು ಯಹೂದಿ ಅಲ್ಲದ ದೊಡ್ಡ ದೊಡ್ಡ ಗುಂಪುಗಳು ಜುಡಾಯಿಸಂ ಕಡೆ ಆಕರ್ಷಿತವಾದವು. ವಿವಿಧ ಯಹೂದಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮತ್ತು ಯಹೂದಿಗಳ ಮತಧರ್ಮಕ್ಕೆ ಆಕರ್ಷಿಸುವ ರಾಜಕೀಯ ಮತ್ತು ಆರ್ಥಿಕ ಶಕ್ತಿ ಇಲ್ಲದ ಕಾರಣ ಹಾಗೂ ಯಹೂದಿ ಬುಡಕಟ್ಟುಗಳು ತಮ್ಮ ಸಂಸ್ಕೃತಿಯನ್ನು ಹೆಚ್ಚಿನ ರೀಯಲ್ಲಿ ಹರಡಲು ಬಯಸಲಿಲ್ಲ. ಏಕೆಂದರೆ ಈ ವೇಳೆ ಕ್ರೈಸ್ತ ಮಿಷನರಿಗಳಂತಹ ಸಂಸ್ಥೆಗಳು ಆರಂಭದಲ್ಲಿ ಇಲ್ಲದ ಕಾರಣ ಯಹೂದಿಗಳ ಸಂಸ್ಕೃತಿಗೆ ಅಡ್ಡಿಯಾಗಲಿಲ್ಲ.

ದಕ್ಷಿಣ ಅರೇಬಿಯಾದಲ್ಲಿನ ರಾಜವಂಶದ ಕೆಲವರು ಜುಡಾಯಿಸಂಗೆ ಮತಾಂತರಗೊಂಡರು. ಕೆಲವು ಯಹೂದಿ ಬುಡಕಟ್ಟುಗಳು ತಮ್ಮನ್ನು ಜುಡಾಯಿಸಂಗೆ ಪರಿವರ್ತಿಸಲು ಪ್ರೇರೇಪಿಸಿದವು. ಜುಡಾಯಿಸಂ ವಿಮೋಚನೆಯ ಭರದಲ್ಲಿ ಜಗತ್ತಿನಲ್ಲಿ ವ್ಯಾಪಕವಾಗಿ ಹರಡಿತ್ತು. ಯಹೂದಿ ಸಮುದಾಯದ ಕೆಲವು ವರ್ಗಗಳಲ್ಲಿ ಮೆಸ್ಸಿಯಾನಿಕ್ ಚಳುವಳಿಯಿಂದ ಸಹಸ್ರಾರು ಕಲ್ಪನೆಗಳು ಪ್ರಬಲವಾದವು. ಇದರಿಂದ ಇತರ ಸಮುದಾಯಗಳ ಮೇಲೆ ಪ್ರಭಾವ ಬೀರಿತು. ಅಲ್ ಕಿರ್ಕಿಸಾನಿಯು 'ಕಿತಾಬ್ ಅಲ್ ಅನ್ವರ್ ವಾಲ್ ಮಾರಾಕಿಬ್'ನಲ್ಲಿ ಅಬು ಇಸಾನ ಅನಂತರ ಮಾತ್ರ ದೇಶದಿಂದ ಬೇರ್ಪಟ್ಟ ಯಹೂದಿಗಳಲ್ಲಿ ಹಲವು ಗುಂಪುಗಳಿದ್ದು, ಅವುಗಳಲ್ಲಿ ಕೆಲವರು ಡಮಾಸ್ಕಸ್‌ನಲ್ಲಿ ವಾಸಿಸುತ್ತಿದ್ದು, ಅವು ಸಣ್ಣ ಸಣ್ಣ ಗುಂಪನ್ನು ಹೊಂದಿದ್ದು, ಮೌಖಿಕ ಕಾನೂನುಗಳನ್ನು ಪಾಲಿಸುವ ಮೂಲಕ ಆಡಳಿತರೂಢ ಸರ್ಕಾರವನ್ನು ವಿರೋಧಿಸಿ 'ಕರೈಟ್' ಚಳುವಳಿ ನಡೆಸಿದರು. ಕಾರೈಟ್‌ಗಳು ಲಿಖಿತ ಕಾನೂನಿನ ಆಧಾರದ ಮೇಲೆ ಪ್ರತ್ಯೇಕವಾಗಿ ಅಧಿಕಾರ ಸ್ಥಾಪಿಸಿದರು. ಎಕ್ಸಿಲಾರ್ಕ್‌ನ ಮರಣದ ಅನಂತರ ಈ ಚಳುವಳಿ ಯಶಸ್ವಿಯಾಗಲಿಲ್ಲ. ಬ್ಯಾಬಿಲೊನಿಯಾದಲ್ಲಿ ಕೆಲವು ಶಿಕ್ಷಣ ತಜ್ಞರಿಗೆ ವಿನಾಯಿತಿ ನೀಡಲಾಯಿತು.

---

[1]. ಅತಿಥಿ ಉಪನ್ಯಾಸಕರು,ಪಶ್ಚಿಮ ಏಷ್ಯಾ ಅಧ್ಯಯನ, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು

.

ಅನನ್ ಸದ್ದುಕಾಸ್‌ನ ಅನಂತರ ಹಲವಾರು ಶತಮಾನಗಳ ಕಾಲ ಅಸ್ಥಿತ್ವದಲ್ಲಿ ಮೌಖಿಕ ಕಾನೂನನ್ನು ವಿರೋಧಿಸಿದ್ದರಿಂದ ಜುಡಾಯಿಸಂ ವಿಭಜನೆಯಾಯಿತು. ಹೊಸ ಪಂಥವಾಗಿದ್ದ ಬ್ಯಾಬಿಲೋನಿಯಾದಲ್ಲಿ ಯೆಶಿವೋಟ್‌ನಿಂದ ದೂರದಲ್ಲಿ ಯಹೂದಿಗಳು ನೆಲೆಸಿದರು. ಈ ಹೊಸ ಪಂಥದ ಉದಯಕ್ಕೆ ಬೆಂಜಮಿನ್ ಅಲ್ ನಿಹವಾಂಡಿ ಮತ್ತು ಡೇನಿಯಲ್ ಕುಮಿಸಿ ಮುಖ್ಯಸ್ಥರಾಗಿದ್ದರು. ಇವರನ್ನು ಕರೈಟ್ಸ್ (ಸ್ಕ್ರಿಪ್ಚರ್ಸ್ ಮಕ್ಕಳು) ಎಂದು ಕರೆಯಲಾಗಿದೆ. ಅಲ್ ಕಿರ್ಕಿಸ್ಥಾನಿಯಾದಲ್ಲಿ ಇವರ ಬೋಧನೆಗಳಲ್ಲಿ ಸಾಕಷ್ಟು ವ್ಯತ್ಯಾಸವಿದ್ದು ಸ್ವಂತ ನಾಡನ್ನು ಹೊಂದುವ, ಸ್ವಂತ ಕಾನೂನನ್ನು ರಚಿಸುವ ಹಾಗೂ ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚಿನ ಆಧ್ಯತೆಯನ್ನೇ ನೀಡಿದರು. ಇದರ ಕಾರಣ ಮತ್ತು ಪರಿಣಾಮದಿಂದಾಗಿಯೇ ಉತ್ತರ ಆಫ್ರಿಕಾದಲ್ಲಿಯೂ ಕೂಡ ಕರೈಟ್ ಚಳುವಳಿಯು ನಡೆಯಿತು. ಪ್ಯಾಲೇಸ್ತೇನ್‌ನಲ್ಲಿ ಭಾವನಾತ್ಮಕ ಆಧಾರದ ಮೇಲೆಯೇ ಪ್ರಸಾರಗಳು ಹಲವು ಹತ್ತು ರೀತಿಯಲ್ಲಿ ನಡೆದವು. ಯಹೂದಿಗಳು ಜೆರುಸಲೆಮ್‌ಗೆ ಹೋಗುವ ಮತ್ತು ಪವಿತ್ರ ನಾಡನ್ನು ಕಟ್ಟುವ ನೆನಪಿನಲ್ಲಿ ಸನ್ನದ್ಧರಾದರು. ಹೊಸಾನಾ ರಬ್ಬ್‌ನಲ್ಲಿ ನಿರಾಶ್ರಿತರು ಒಲಿವರ್ ಪರ್ವತದಲ್ಲಿ ಪ್ರಾರ್ಥನೆ ಸಲ್ಲಿಸಲು, ದೇವರ ಆಶೀರ್ವಾದಗಳಿಸಲು ಮುಂದಾದರು. ಹಲವು ವರ್ಷಗಳ ಕಾಲ ಶಾಪದಲ್ಲಿದ್ದ ಇವರು ವಿಮುಕ್ತಿಗಾಗಿ ತಾಯಿನಾಡಿಗೆ ಹಿಂದಿರುಗಿವ ವಿಮೋಚನಾ ಚಳುವಳಿಯನ್ನು ನಡೆಸಿದರು.

ಯಹೂದಿ ಮೂಲಗಳ ಪ್ರಕಾರ ಖಲೀಪರಾದ ಉಮರ್ ಮತ್ತು ಆಲಿ ಬ್ಯಾಬಿಲೋನಿಯಾದಲ್ಲಿ ಯಹೂದಿ ಸಮುದಾಯವು ಅಲ್ಲಿನ ಸಂಸ್ಥೆಗಳ ಮೇಲೆ ಸಹಾನುಭೂತಿ ಹೊಂದಿದ್ದರು. ಆದರೆ, ಪರ್ಷಿಯನ್ ಸಾಮ್ರಾಜ್ಯದಲ್ಲಿ ಸಾಮಾಜಿಕ ಮತ್ತು ರಾಜಕೀಯ ಕ್ರಾಂತಿಗಳಿಂದ ಇಲ್ಲಿನ ಯಹೂದಿಗಳ ಸ್ಥಾನಮಾನ ಕುಸಿಯಿತು. ಇದರಿಂದ ಯಹೂದಿಗಳ ಪ್ರಭಾವ ಎಲ್ಲಾ ವಲಯಗಳಿಂದ ದುರ್ಬಲವಾಗುತ್ತಾ ಅವಸಾನದ ಕಡೆ ಸಾಗಿತ್ತು ಎನ್ನಬಹುದು. ಆರಂಭದ ವೇಳೆ ಕೆಲವು ಸಮಯ ಚೇತರಿಕೆ ಕಂಡುಬಂದರೂ ಸಹ ಮುಸ್ಲಿಂ ಅಧಿಕಾರಿಗಳ ನೀತಿಗಳಿಂದ ಹಿನ್ನೆಡೆಗಳಾದವು. ಎಕ್ಸಿಲಾರ್ಕ್‌ನಲ್ಲಿ ರಾಜಕೀಯ ಅಸ್ಥಿರತೆಯ ಅನಂತರ ಯಹೂದಿ ಪತ್ನಿಯವರಿಗೆ ಮತ್ತು ರಾಜಕುಮಾರರಿಗೆ ಆಡಳಿತದಲ್ಲಿ ಅವಕಾಶ ನೀಡಲಾಯಿತು. ಇರಾಕಿನ ಯಹೂದಿಗಳಿಗೆ ಅನುವಂಶಿಕ ಹಾಗೂ ಚುನಾಯಿತ ಪ್ರತಿನಿಧಿಗಳಿಗೆ ನೀಡುತ್ತಿದ್ದ ಎಲ್ಲಾ ಬಗೆಯ ತೆರಿಗೆಗಳ ಆಡಳಿತವನ್ನು ನೀಡಲಾಯಿತು. ಇದರಿಂದ ಮುಸ್ಲಿಂ ಆಡಳಿತಗಾರರ ಮುಂದೆ ಯಹೂದಿಗಳನ್ನು ಪ್ರತಿನಿಧಿಸಲಾಯಿತು. ಇವರು ಸ್ವಾಯತ್ತ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದಿದ್ದು, ತಮ್ಮ ಸಮುದಾಯದ ನಿಯಮಗಳನ್ನು ಜಾರಿಗೆ ತಂದರು.

ಕ್ರಿ.ಶ. 1168ರಲ್ಲಿ ಬಾಗ್ದಾದ್‌ಗೆ ಭೇಡಿ ನೀಡಿದ ಬೆಂಜಮಿನ್, ಡೇನಿಯಲ್ ಆಕ್ರಮಿಸಿಕೊಂಡಿರುವ ಎಕ್ಸಿಲಾರ್ಕ್ ಸುತ್ತಲಿನ ಗೌರವ ಮತ್ತು ಪ್ರತ್ಯೇಕ್ಷ ಸಾಕ್ಷಿಗಳ ವಿವರಗಳನ್ನು ನೀಡುತ್ತಾರೆ. ಹಸ್ಸೈ ಖಲೀಪರ ಆಡಳಿತದಲ್ಲಿ ಪ್ರತಿ ಗುರುವಾರ ಯಹೂದಿಗಳು ಭೇಟಿ ಮಾಡುವಾಗ ಪ್ರೇಕ್ಷಕರಂತೆ ಕಾದು

ನಿಂತಿರಬೇಕಿತ್ತು. ಮುಸ್ಲಿಂ ಗಣ್ಯರು ಖಲೀಪನ ಪಾದಗಳಿಗೆ ನಮಸ್ಕರಿಸುತ್ತಿದ್ದರು. ಯಹೂದಿ ಪ್ರವಾಸಿಗ ರೆಗನ್ ಬರ್ಗ್ ಹೇಳುವಂತೆ ಯಹೂದಿಗಳು ತಪ್ಪು ಮಾಡಿದರೆ ಅವರಿಗೆ ಉಗ್ರ ಶಿಕ್ಷೆ ಮತ್ತು ಜೈಲುವಾಸ ವಿಧಿಸಲಾಗುತ್ತಿತ್ತು. ಮಂಗೋಲ್ ಖಾನ್ ಹಲೇಗನು ಬಾಗ್ದಾದ್ ವಶಪಡಿಸಿಕೊಂಡಾಗ ಯಹೂದಿಗಳು ಖಲೀಪನಿಗೆ ನೇರವಾಗಿ ತೆರಿಗೆಯನ್ನು ನೀಡದೇ ಮುಸ್ಲಿಂ ಅಧಿಕಾರಿಗಳ ಮೂಲಕ ಒಂದು ವರ್ಷಕ್ಕೆ ಒಂದು ಚಿನ್ನದ ದಿನಾರರನ್ನು ಪಾವತಿಸಬೇಕಿತ್ತು.

ಕ್ರಿ.ಶ. 1401ರಲ್ಲಿ ಯಹೂದಿಗಳು ಎಕ್ಸಿಲಾರ್ಕ್‌ನಲ್ಲಿ ವಾಸಿಸುತ್ತಿದ್ದರು. ಅಬ್ಬಾಸಿದ್ ಖಲೀಪರ ಕಾಲದಲ್ಲಿ ಸೆಲ್ಜುಕ್ ಮೇಲೆ ಅರಬ್ಬರ ಸೈನ್ಯ ಹಾದು ಹೋಗುವಾಗ ಮೊಸುಲ್, ಡಮಾಸ್ಕಸ್ ಮತ್ತು ಅಲೆಪ್ಪೊದಲ್ಲಿ ಅರೆ ಸರ್ಕಾರಗಳು ರಚನೆಯಾದವು. ಬ್ಯಾಬಿಲೋನಿಯಾದಲ್ಲಿ ನಿರ್ಧಿಷ್ಟಗೊಳಿಸಿದ ಪ್ರದೇಶದಲ್ಲಿ ಯಹೂದಿಗಳು ವಾಸಿಸಬೇಕಿತ್ತು. ಯಹೂದಿ ಪ್ರವರ್ತಕ ಡೇವಿಡ್‌ನ ಅನಂತರ ಎಕ್ಸಿಲಾರ್ಕ್‌ನಲ್ಲಿ ವಿಭಜನೆಯಾಗತೊಡಗಿತ್ತು. ಅರಬ್ ಪ್ರತಿನಿಧಿಗಳು ತಲೆಗಂದಾಯದಂತಹ ತೆರಿಗೆಗಳನ್ನು ಸಂಗ್ರಹಿಸಿದರು. ಮುಸ್ಲಿಂ ಸಮುದಾಯಕ್ಕೆ ಮುಸ್ಲಿಂ ನ್ಯಾಯಾಧೀಶರನ್ನೇ ನೇಮಿಸಲಾಯಿತು.

ಈಜಿಪ್ಟ್ ಮತ್ತು ಆಫ್ರಿಕಾದಲ್ಲಿ ಯಹೂದಿ ಸಂಘಟನೆಗಳು ಭಿನ್ನವಾಗಿದ್ದವು. ಕೆಲವು ರಾಜಕೀಯ ಕಾರಣಗಳಿಂದ ಈಜಿಪ್ಟ್‌ನ ಫ್ಯಾಟಿಮೈಟ್‌ನಲ್ಲಿ ಖಲೀಪರ ವಾಸಸ್ಥಾನಗಳಲ್ಲಿ ಯಹೂದಿಯರು ವಾಸಿಸಲು ಇಷ್ಟಪಡಲಿಲ್ಲ. ಈ ಪದ್ಧತಿ ಮೊರಾಕೋ ಭಾಗಕ್ಕೂ ವಿಸ್ತರಿಸಿತು. ಇದರಿಂದ ಸ್ಪೇನ್ ಮತ್ತು ಮೊರಾಕೋ ಭಾಗದಲ್ಲಿ ಸ್ಥಳೀಯ ಯಹೂದಿಗಳನ್ನು ಬೇರ್ಪಡಿಸಲು ಮುಸ್ಲಿಂಮರು ಮುಂದಾದರು. ಈಜಿಪ್ಟ್‌ನಲ್ಲಿ ಎಕ್ಸಿಲಾರ್ಕ್‌ನಂತೆ ಯಹೂದಿಗಳ ಪ್ರತಿನಿಧಿಗಳು, ನ್ಯಾಯಾಧೀಶರು, ಇದ್ದರೆಂದು ಆದರೆ ಜೆರುಸಲೆಮ್‌ನಲ್ಲಿ ವ್ಯತಿರಿಕ್ತ ವಾತಾವರಣ ಇತ್ತು ಎಂದು ತಿಳಿದುಬಂದಿದೆ.

ಪ್ಯಾಲೇಸ್ತೇನ್, ಸಿರಿಯಾ, ಮತ್ತು ಕೈರೋದಲ್ಲಿ ಯಹೂದಿ ಸಮುದಾಯಗಳು ನಾಡಿಗ್ ಆಡಳಿತದ ಆಧೀನದಲ್ಲಿದ್ದರು. ಕೈರೋ ಪ್ರಾಂತ್ಯದ ಅನುಮತಿ ಇಲ್ಲದೆ ಸ್ಥಳೀಯ ನಾಡಿಗ್‌ರನ್ನು ನೇಮಿಸುವಂತಿಲ್ಲ. ನಾಡಿಗ್ ಹೊರತುಪಡಿಸಿ ಇತರ ಇಬ್ಬರು ಅಧಿಕಾರಿಗಳ ನೇಮಕವು ಸಹ ಇತ್ತು. ರಾಜ ಹಜಾಜ್ ಕೈರೋವನ್ನು ವಶಪಡಿಸಿಕೊಳ್ಳುವವರೆಗೂ ನಾಡಿಗ್ ಕಛೇರಿ ಯಹೂದಿಗಳ ಅಧೀನದಲ್ಲಿದ್ದವು. ಅನಂತರ ಇಸ್ಲಾಂ ಪ್ರಭಾವದಿಂದ ಆಡಳಿತ ಪದ್ಧತಿಯನ್ನು ರದ್ದುಗೊಳಿಸಲಾಯಿತು.

**ಆರ್ಥಿಕ ಬದಲಾವಣೆಗಳು**

ಸ್ಪೇನ್, ಪರ್ಷಿಯಾ, ಬೈಜಾಂಟೇನ್ ಮೇಲಿನ ಅರಬ್ಬರ ದಾಳಿ ಆರ್ಥಿಕ ವ್ಯವಸ್ಥೆಯನ್ನು ಒಡೆಯುವುದೇ ಆಗಿತ್ತು. ಖಲೀಪ ಸಾಮ್ರಾಜ್ಯದೊಳಗೆ ಎಲ್ಲಾ ಪ್ರಜೆಗಳನ್ನು ಆರ್ಥಿಕವಾಗಿ ನಿಯಂತ್ರಿಸುವ

ಹಾಗೂ ಅವರನ್ನು ಸಮಗ್ರವಾಗಿ ಸಬಲೀಕರಣಗೊಳಸುವ ಶಕ್ತಿಯನ್ನು ಹೊಂದಿದ್ದನು. ನಗರೀಕರಣ ಮತ್ತು ಆಡಳಿತ ಕೇಂದ್ರಗಳ ಅಭಿವೃದ್ಧಿಗಾಗಿ ಹೊಸ ಭಾಷ್ಯಗಳನ್ನೂ ಕೂಡ ಬರೆದರು. ಉದಾಗೆ: ಅಹ್ವಾಜ್, ತುಸ್ಸಾರ್, ಕುಫಾ, ಬಾಗ್ದಾದ್, ರಮ್ಲಾ, ಕೈರೋ ಖೈರವಾನ್ ಮುಂತಾದ ನಗರಗಳಲ್ಲಿ ವಾಣಿಜ್ಯ ಕೇಂದ್ರಗಳಾಗಿ, ಧಾರ್ಮಿಕ ಕೇಂದ್ರಗಳಾಗಿ ಪರಿವರ್ತನೆಯಿಂದ ಬದಲಾವಣೆಗಳಾದವು. ಜೆರುಸಲೆಮ್, ಸಿರಿಯಾದಲ್ಲಿ ಜನಸಂಖ್ಯೆ ಕಡಿಮೆಯಾದಂತೆ ಹೊಸ ಉಪನಗರಗಳಂತೆ ಹಳೆಯ ನಗರಗಳು ತಲೆಯೆತ್ತಲಿಲ್ಲ. 9ನೇ ಶತಮಾನದಲ್ಲಿ ಮೆಡಿಟೇರಿಯನ್ ಪ್ರದೇಶ ಹೊಸ ಬಂದರು ಆಗಿ ಬದಲಾವಣೆ ಕಂಡುಬಂದಿತ್ತು. ವಿಶೇಷವಾಗಿ ಪಶ್ಚಿಮ ವಲಯದಲ್ಲಿ ಅರಬ್ ನೌಕಾಪಡೆಯ ಪ್ರಗತಿಯಿಂದ ಸೈಪ್ರಸ್, ಕ್ರೀಟ್, ಸಿಸಿಲಿ, ದಕ್ಷಿಣ ಇಟಲಿಯಲ್ಲಿ ಬೈಜಾಂಟನ್ ಸಾಮ್ರಾಜ್ಯದ ಮೇಲೆ ಅರಬ್ಬರ ದಾಳಿಗಳು ನಡೆದವು. ಬೈಜಾಂಟೈನ್ ವ್ಯಾಪಾರ ಸ್ಥಳವಾದ್ದರೂ ಮುಸ್ಲಿಂ ವ್ಯಾಪಾರಿಗಳು ಪೂರ್ವ, ಪಶ್ಚಿಮ, ಉತ್ತರ, ಹಾಗೂ ದಕ್ಷಿಣದ ಕಡಲ ತೀರದಲ್ಲಿ ವ್ಯಾಪಾರ ಹೆಚ್ಚಳವಾದ್ದರಿಂದ ಬಿಜಿಯಾ, ಸಬ್ರಾ, ಸಲಾಗಳಲ್ಲಿ ಈಜಿಪ್ಟ್, ಸಿರಿಯಾ, ಸಿಸಿಲಿಗಳಲ್ಲಿ ಹಾಗೂ ಹಿಂದೂ ಮಹಾಸಾಗರದವರೆಗೂ ಅರಬ್ಬರು ಹಿಡಿತ ಸಾಧಿಸಿದ್ದರಿಂದ ಯಹೂದಿಗಳ ವ್ಯಾಪಾರ ಕ್ಷಿಣಿಸಿ ಪ್ಯಾಲೇಸ್ತೇನ್‌ಗೆ ಮಾತ್ರ ಸೀಮಿತಗೊಳ್ಳುವಂತಾಯಿತು.

ಅನೇಕ ಇಸ್ಲಾಂ ದೇಶಗಳಲ್ಲಿ ಚಿನ್ನ, ಬೆಳ್ಳಿ ವ್ಯಾಪಾರ ಮಾಡುವುದನ್ನು ಪ್ರಯೋಗಿಕವಾಗಿ ನಿಷೇಧಿಸಲಾಯಿತು. ಏಕೆಂದರೆ ಇಸ್ಲಾಂಮಿಕ್ ಕಾನೂನುಗಳಲ್ಲಿ ಲೋಹಗಳ ಕೆಲಸಕ್ಕಾಗಿ ಹೆಚ್ಚು ಬಡ್ಡಿ ಪಡೆಯುವುದು ಅಪರಾಧವಾದ್ದರಿಂದ ನಿಯಂತ್ರಣಕ್ಕೆ ಒಳಪಡಿಸಲಾಯಿತು. ಲೋಹಗಳ ಕೆಲಸವನ್ನು ಯಾವುದೇ ಕೂಲಿ, ಅಥವಾ ಪರಿಹಾರವಿಲ್ಲದೆ ಮಾಡಬೇಕೆಂಬ ನಿಯಮಗಳಿದ್ದವು. ಹಾಗಾಗಿ ಮುಸ್ಲಿಂಮರು ಚಿನ್ನ, ಬೆಳ್ಳಿ ವೃತ್ತಿಯಲ್ಲಿ ತೊಡಗಿಕೊಳ್ಳಲಿಲ್ಲ. ಜೊತೆಗೆ ಈ ವೃತಿಯಲ್ಲಿ ಅಪಾರವಾದ ಜ್ಞಾನಗಳಸಬೇಕಿತ್ತು. ಲೋಹಗಳ ಪರೀಕ್ಷೆ, ಹಣ ವಿನಿಯೋಗ, ಚಲಾವಣೆ, ಸಂಗ್ರಹದ ಬಗ್ಗೆ ಅರಿವಿರಬೇಕಿತ್ತು. ಉದಾ: 'ಜಹಬಾದ್' ಎಂಬ ಪರ್ಷಿಯಾ ಪದವು ಹಣ ವರ್ಗಾಯಿಸುವ ವ್ಯಕ್ತಿ, ನಾಣ್ಯ ಪರೀಕ್ಷಕ, ತೆರಿಗೆ ಸಂಗ್ರಹಿಕ, ಬ್ಯಾಂಕರ್ ಎಂಬ ಭಿನ್ನ ಪದಗಳಲ್ಲಿ ವಿವರಿಸುತ್ತದೆ. ಆದ್ದರಿಂದ ಮುಸ್ಲಿಂ ರಾಷ್ಟ್ರಗಳಲ್ಲಿ ಕ್ರಿಶ್ಚಿಯನ್ನರು ಮತ್ತು ಯಹೂದಿಗಳು ಲೋಹಗಳ ವ್ಯಾಪಾರದಲ್ಲಿ ತೊಡಗಿರುತ್ತಿದ್ದರು. ಅಗ್ಲಾಬಿ ಪ್ರದೇಶದಲ್ಲಿ ಕ್ರಿಶ್ಚಿಯನ್ನರು ಟಂಕಸಾಲೆಯನ್ನು ನಿರ್ವಹಿಸುತ್ತಿದ್ದರು. ಈಜಿಪ್ಟ್, ಯೆಮೆನ್, ಆಫ್ರಿಕಾದಲ್ಲಿ ಲೇವಾದೇವಿಗಾರರಾಗಿ, ಚರ್ಮಕಾರರಾಗಿ, ಶೂ ತಯಾರಕರಾಗಿ, ನೇಕಾರರಾಗಿ, ಬಣ್ಣ ಕೆಲಸಗಾರರಾಗಿ, ಲೆನಿನ್, ರೇಷ್ಮೆ, ಮುತ್ತು, ರತ್ನ, ಸುಗಂಧದ್ರವ್ಯ ಕೆಲಸಗಾರರಾಗಿ ಮತ್ತು ಐಷರಾಮಿ ವ್ಯಾಪಾರದಲ್ಲಿ ಗೌರವವನ್ನು ಯಹೂದಿಗಳು ತೊಡಗಿದರು. ಅರಬ್ ಮೂಲದ ಪ್ರಕಾರ ಖಲೀಫನ ಕಾಲದಲ್ಲಿ ಯಹೂದಿಗಳು ಬಾಗ್ದಾದ್‌ನಲ್ಲಿ ರೈತರು, ಬ್ಯಾಂಕರ್‌ಗಳಾಗಿಯೂ ಕೂಡ ಕಾರ್ಯನಿರ್ವಹಿಸುತ್ತಿದ್ದರು. ಬಾಗ್ದಾದ್‌ನ ವ್ಯಾಪಾರಿಯೊಬ್ಬ ಈಜಿಪ್ಟ್‌ನಲ್ಲಿ ಫಾತಿಮದ್ ಆಡಳಿತದಲ್ಲಿ ವಜೀರನಾಗಿ ಸೇವೆಸಲ್ಲಿಸಿದನು. ಮತ್ತು ಯಹೂದಿಗಳ ಅಧಿಕೃತ ಟ್ರಸ್ಟಿಗಳಾಗಿದ್ದರು. ಈಜಿಪ್ಟ್‌ನಲ್ಲಿ ಒಬ್ಬ

ವ್ಯಾಪಾರಿ ಕಾಪೂರ್‌ನ ವಿಶ್ವಾಸಗಳಿಸಿದ. ಸಿರಿಯಾದಲ್ಲಿ ದಿವಾನನಾಗಿ, ನಿರ್ದೇಶಕನಾಗಿ ಸೇವೆಸಲ್ಲಿದುತ್ತಿದ್ದರಿಂದ ಇತರ ಮುಸ್ಲಿಂಮರ ಅಸೂಯೆಯನ್ನು ಹೆಚ್ಚಿಸಿತು. ಆದ್ದರಿಂದ ಕಪೂರ್ ಮರಣಸ ಅನಂತರ ವ್ಯಾಪಾರಿಗಳು ಈಜಿಪ್ಟ್‌ನಿಂದ ಪಲಾಯನ ಮಾಡಿದರು. ಆದರೆ ಯಹೂದಿಗಳ ಪ್ರಯತ್ನಗಳಂದ ಅಲ್ ದಿ ಫಾತಿಮದ್ ಖಲೀಪ್ ಅಲ್ ಮುಯಿಜ್ ಮತ್ತೆ ಯಹೂದಿಗಳಿಗೆ ಆಡಳತದ ಅಧಿಕಾರಗಳನ್ನು ನೀಡಿದನು. ಅರಬ್ ದಂಡಯಾತ್ರೆಯ ಕಾಲದಲ್ಲಿ ಸೈನ್ಯ ಕಾರ್ಯಚರಣೆಯ ಮುಖ್ಯಸ್ಥನಾಗಿ ಸೇವೆಸಲ್ಲಿಸಿದರು. ಜೊತೆಗೆ ಫಾತಿಮದ್ ಆಸ್ಥಾನದಲ್ಲಿ ಎತ್ತರಕ್ಕೆ ಬೆಳೆದು ಪ್ರಧಾನಿಯಾಗಿ ಸೇವೆ ಸಲ್ಲಿಸುವ ಮೂಲಕ ದೇಶದ ಸಾರ್ವಜನಿಕ ತೆರಿಗೆ ಸಂಗ್ರಹಣೆಗೆ ಅಡಿಪಾಯ ಹಾಕಿದರು. ಈತ ಕೊನೆಯಲ್ಲಿ ಇಸ್ಲಾಂ ಧರ್ಮ ಸ್ವೀಕರಿಸಿ ಕೆಲವು ಯಹೂದಿಗಳಿಗೆ ಇತರ ಹುದ್ದೆಗಳನ್ನು ನೀಡುವಲ್ಲಿ ಯಶಸ್ವಿಯಾದರು. ಇದರಿಂದ ಈತನನ್ನು ಸಿರಿಯಾ, ಈಜಿಪ್ಟ್‌ಗೆ ಗುಪ್ತಚರ ಇಲಾಖೆಯ ಮುಖ್ಯಸ್ಥರಾಗಿ ನೇಮಿಸಲಾಯಿತು.

ಪರ್ಷಿಯಾ ಮೂಲದ ವ್ಯಾಪಾರಿ ಸಹಲ್ ಅಲ್ ತುಸ್ತಾರಿಯಾ ಪುತ್ರರು ಫತಿಮದ್ ಆಡಳಿತದಲ್ಲಿ ಪ್ರಮುಖರಾಗಿದ್ದು ತುಸ್ಸಾರ್ ವಾಣಿಜ್ಯ ಕೇಂದ್ರ ಅಭಿವೃದ್ಧಿಯಲ್ಲಿ ಯಹೂದಿಗಳು ಹೆಚ್ಚಿನ ಪಾಲನ್ನು ಹೊಂದಿದ್ದರು. ಹಾಗೂ ಸಾಹ್ಲ್ ಸಂಸ್ಥೆಯ ಪ್ರಗತಿಯಲ್ಲಿ ಅಮೂಲ್ಯ ಕಾಣಿಕೆ ನೀಡಿದ್ದರಿಂದ ಅರಬ್ಬರ ವಾಣಿಜ್ಯ ಬೆಳವಣಿಗೆಗೆ ಸಹಕಾರಿಯಾಯಿತು. ಪರ್ಷಿಯನ್ ಪ್ರವಾಸಿ ನಾಸಿರುಲ್ ಖುಸ್ರು ಮತ್ತು ಈಜಿಪ್ಟ್‌ನ ಬರಹಗಾರ ಅಲ್ ಮಕ್ರೀಜ್ ಸಹಲ್ ಯಹೂದಿ ಪುತ್ರರ ಸಂಪತ್ತನ್ನು ಮೆಚ್ಚಿ ಹೊಗಳಿದ್ದಾರೆ. 12ನೇ ಶತಮಾನದಲ್ಲಿ ಭಾರತ, ಚೀನಾ, ಬ್ಯಾಬಿಲೋನಿಯಾ, ಪ್ಯಾಲೇಸ್ತೇನ್, ಸಿರಿಯಾ ಒಳಗೊಂಡಂತೆ ಯಹೂದಿಗಳ ವ್ಯಾಪಾರ ಉನ್ನತ ಮಟ್ಟದಲ್ಲಿತ್ತು. ಇವರು ಭೂಮಿ ಮತ್ತು ಸಮುದ್ರದ ಮೇಲೆ ನಿಯಂತ್ರಣ ಸಾಧಿಸಿದರು. ಈ ವೇಳೆ ಮಂಗೋಲರ ಏಳಿಗೆಯಿಂದ ಸೌದಿ ಅರೇಬಿಯಾ, ವೆನಿಸ್, ಜಿನೇವಾ, ಮಾರ್ಸಿಲಸ್ ಇಟಲಿ ಭಾಗಗಳಲ್ಲಿ ಅರಬ್ಬರ ವ್ಯಾಪಾರ ದುರ್ಬಲಗೊಂಡಿತ್ತು. ಇದರಿಂದ ಅರಬ್ಬರ ಉತ್ತೇಜನ ಯಹೂದಿ ವ್ಯಾಪಾರಸ್ಥರಿಗೆ ಇಲ್ಲದ ಕಾರಣ ಅವರ ಆರ್ಥಿಕ ಚಟುವಟಿಕೆ ಗಣನೀಯವಾಗಿ ಕುಸಿಯಿತು. ಹೀಗಾಗಿ ಈಜಿಪ್ಟ್‌ನಲ್ಲಿ ಯಹೂದಿಗಳು ಬಡತನದ ಜೀವನವನ್ನು ಅನುಭವಿಸಿದರು. ಯಹೂದಿಗಳಲ್ಲಿ ಮಧ್ಯಮ ವರ್ಗ ಮತ್ತು ಕುಶಲ ಕರ್ಮಿಗಳು ಅಧಿಕವಾಗಿ ಕಂಡುಬಂದರು. ಈ ಸಂಕಟಕ್ಕೆ ಸಿಲುಕಿದ ಯಹೂದಿಗಳಿಗೆ ರಾಜ್ಯದ ವ್ಯಾಪಾರದ ಏಕಸೌಮ್ಯದ ಪಾಲು ಕಡಿಮೆಯಾಗಿ ಹಾಗೂ ಯುರೋಪಿಯನ್ ಸ್ಪರ್ಧೆಗಳಂದ ಭಾರತದಲ್ಲೂ ವ್ಯಾಪಾರ ಕುಸಿಯಿತು. ಆದರೆ ವ್ಯಾಪಾರ ಬಿಟ್ಟರು ಅಥವಾ ಕುಸಿದರೂ ಸಹ ವೈದ್ಯಕೀಯ ಕ್ಷೇತ್ರದಲ್ಲಿ ಯಹೂದಿಗಳು ಪ್ರಬಲರಾಗಿದ್ದಾರೆ.

**ಯಹೂದಿಗಳ ವಲಸೆ**

ಪ್ಯಾಲೇಸ್ತೇನ್‌ನಲ್ಲಿ ಬಲವಂತದ ಮತಾಂತರದಿಂದಾಗಿ ಯಹೂದಿಗಳ ನೆಲೆಗೊಳ್ಳುವಿಕೆಯು ಕುಸಿಯಿತು. ಹಾಗೂ ಈಜಿಪ್ಟ್, ಆಫ್ರಿಕಾದಲ್ಲೂ ಕ್ಷಿಣಿಸಿದ ಜನಸಂಖ್ಯೆಯಿಂದ ಯಹೂದಿಗಳ ಪ್ರಮಾಣ ಇಳಮುಖವಾಯಿತು. 12ನೇ ಶತಮಾನದ ಮಧ್ಯ ಭಾಗದಲ್ಲಿ ಯಹೂದಿಗಳು ಸಣ್ಣ ಸಣ್ಣ ಗುಂಪುಗಳಾಗಿ ವಲಸೆ ಆರಂಭಿಸಿದರು. ಮಗ್ರಿಬ್ ವಲಸೆಯಿಂದ ಈಜಿಪ್ಟ್, ಪ್ಯಾಲೇಸ್ತೇನ್‌ನಲ್ಲಿ ನೆಲೆಸಿದರು. ಫ್ರಾನ್ಸ್‌ನ ರಬ್ಬಿಗಳ ಗುಂಪೊಂದು ಪ್ಯಾಲೇಸ್ತೇನ್‌ಗೆ ಬಂದಿತು. 14, 15 ಮತ್ತು 16ನೇ ಶತಮಾನದಲ್ಲಿ ಕ್ರೈಸ್ತರ ಪ್ರಾಬಲ್ಯದಿಂದ ಪ್ಯಾಲೇಸ್ತೇನ್‌ಗೆ ವಲಸೆಯು ಹೆಚ್ಚಾಯಿತು. ಯಹೂದಿಗಳ ಮೇಲಿನ ಕೈಸ್ತರ ಮತ್ತು ಅರಬ್ಬರ ನಿರಂತರ ಕಿರುಕುಳದಿಂದ ತಮ್ಮ ಪವಿತ್ರ ಭೂಮಿಗೆ ಮರಳಲು ಮುಂದಾದರು. ಜೊತೆಗೆ ಹಂಗೇರಿ, ಉಕ್ರೇನ್, ಸ್ಪೇನ್ ಯಹೂದಿಗಳು ಸಹ ವಲಸೆ ಬರಲು ಮುಂದಾದರು. 1391ರಲ್ಲಿ ಸ್ಪೇನ್, ಬಾಲ್ಟೆರಿಕ್ ಪ್ರದೇಶದಿಂದ ಯಹೂದಿಗಳನ್ನು ಹೊರ ಹಾಕಲಾಯಿತು. ಇದರಲ್ಲಿ ಹೆಚ್ಚಿನವರು ಅಲ್ಜೀರಿಯನ್ ಸಮುದ್ರ ಬಂದರುಗಳಾದ ಹುನೈನ್, ಓರಾನ್, ಮುಸ್ತಘಾನಿಮ್, ತಾನಾಸ್, ಬ್ರಿಶ್ಚಿ, ಅಲ್ಜಿಯರ್ಸ್, ಬಿಜಯಾ, ಸಹ ಟುನ್ನಿಸ್, ಟ್ಲೆಮ್ಸನ್, ಮಿಲಾನಾ ಮತ್ತು ಕಾನ್ಸಂಟೈನ್‌ನಿಂದ ಬಂದವರಾಗಿದ್ದರು. ಸ್ಪೇನ್‌ನಿಂದ ಹೊರ ಹಾಕಲ್ಪಟ್ಟ ಇವರು ಫೆಜ್, ಮಕ್ರೇಸ್, ಶಾಪ್‌ಶಾವಾನ್, ಅಸಿಲಾ, ಸಫಿ, ಬಾಡಿಸ್‌ಗಳಲ್ಲಿ 1492ರ ಹೊತ್ತಿಗೆ ನೆಲೆಸಿದರು. 16ನೇ ಶತಮಾನದಲ್ಲಿ ಆಫ್ರಿಕಾದಿಂದ ಬಂದ 3ನೇ ಅಲೆಯು ತಾಯ್ನಾಡಿನ ಕಡೆ ಧಾವಿಸಿತು. ಸುಲೇಮನ್ ಮತ್ತು 2ನೇ ಸಲೀಂನ ಕಾಲದಲ್ಲಿ ಒಟ್ಟೋಮನ್ ಟರ್ಕಿ ಉತ್ತುಂಗದ ಕಾಲ ತಲುಪಿದರಿಂದ ಟರ್ಕಿಸ್ ಆಳ್ವಿಕೆಗೆ ಒಳಪಟ್ಟು ನಾನಾ ಕಷ್ಟಗಳನ್ನು ಅನುಭವಿಸಿದರು. ಒಂದು ಕಡೆ ಸ್ಪೇನ್ ಭಾಗದಲ್ಲಿ ಕ್ರೈಸ್ತರು ಬೆದರಿಕೆಗಳನ್ನು ಹಾಕಿದರು. ಈ ವೇಳೆ 1451–81ರಲ್ಲಿ ಏಡ್ರಿಯಾನೋಪಾಲ್‌ನಲ್ಲಿ ಜರ್ಮನ್ ಯಹೂದಿ ಜರ್ಮನಿ ಮತ್ತು ಇಟಲಿಯಲ್ಲಿ ತನ್ನ ಸಹೋದರರಿಗೆ ಟರ್ಕಿಯಲ್ಲಿ ನೆಲೆಸಲು ಶ್ರದ್ಧೆಯಿಂದ ಮನವಿ ಮಾಡಿದ. ಆದರೆ ಅವರ ಮೇಲೆ ಕಿರುಕುಳಗಳು ಹೆಚ್ಚಾದ ಪರಿಣಾಮ 15 ಮತ್ತು 16ನೇ ಶತಮಾನದಲ್ಲಿ ಅಶ್ಕೆನಾಜಿ ಹಾಗೂ ಇಟಾಲಿಯನ್ ಸಾಮ್ರಾಜ್ಯದ ನಗರಗಳಾದ ಕಾನ್ಸಂಟಾಟಿನೋಪಾಲ್, ಏಡ್ರಿಯಾನೋಪಾಲ್, ಸಲೋನಿಕಾ, ಸೋಫಿಯಾ, ವಿಡಿನ್, ಜರ್ಮನಿ, ಪ್ರಾನ್ಸ್, ಹಂಗೇರಿ, ಇಟಲಿ, ಸಿಸಿಲಿ, ಸ್ಪೇನ್, ಪೋರ್ಚುಗಲ್‌ನಿಂದ ಹೊರ ಹಾಕಲ್ಪಟ್ಟವರು. ಒಟ್ಟೋಮನ್ ಸಾಮ್ರಾಜ್ಯದಲ್ಲಿ ಯಹೂದಿ ಸಮುದಾಯಗಳ ಪಾತ್ರವನ್ನು ರೂಪಿಸುವಲ್ಲಿ ನಿರ್ಣಾಯಕವಾದಂತಹ ಪಾತವನ್ನೂ ಕೂಡ ಹೆಚ್ಚಿನದಾಗಿಯೇ ರೂಪಿಸಿದರು. ಲಕ್ಷಾಂತರ ಜನ ಬೈಜಾಂಟೈನ್ ಸಾಮ್ರಾಜ್ಯದಲ್ಲಿ ಅಳವು–ಉಳಿವಿಗಾಗಿ ಹೋರಾಡಬೇಕಾಗಿತ್ತು.

ಉತ್ತರ ಆಫ್ರಿಕಾದಲ್ಲೂ ಸಹ ಯಹೂದಿಗಳ ಜೀವನ ಭಯಾನಕವಾಗಿತ್ತು. ಸ್ಪೇನ್ ವಿದ್ವಾಂಸರಲ್ಲಿ ಒಬ್ಬರಾದ ಆರ್. ಐಸಾಕ್ ಶೆಶೆಟ್ ಪರ್ಫೆಕ್ಟ್ ಹೇಳುವಂತೆ; ಈ ದೇಶದ ಯಹೂದಿ ನಿವಾಸಿಗಳು ಸ್ವಲ್ಪ

ಬ್ರೆಡ್ ಮತ್ತು ನೀರನ್ನು ಖರೀದಿಸಲು ಕಷ್ಟಪಡುತ್ತಾರೆ. ಅವರು ನೆಲದ ಮೇಲೆ ಅಥವಾ ಪ್ರಾಣಿಗಳ ಚರ್ಮದ ಮೇಲೆ ಮಲಗುತ್ತಾರೆ. ರಾತ್ರಿಯ ವೇಳೆ ಚಾಪೆಯಲ್ಲಿ ಸುತ್ತಿಕೊಂಡು ನಿದ್ರಿಸುತ್ತಾರೆ. ಅವರ ಉಡುಪುಗಳು ತೇಪೆಗಳಾಗಿದ್ದು ಚಪ್ಪಲಿಗಳಿಲ್ಲ ಬರಿಗಾಲೇ ಅವರ ಬದುಕಾಗಿತ್ತು ಎಂದಿದ್ದಾರೆ. ಇವರ ಆಧ್ಯಾತ್ಮಿಕ ಪರಿಸ್ಥಿತಿ ಹದಗೆಟ್ಟ ಬಗೆಗೆ ಬರ್ಟನೋರಾದ ಆರ್ ಒಬಾದಿಶ್ ತಿಳಿಸುವಂತೆ ಯಹೂದಿಗಳ ಪಠ್ಯಗಳು ಸಿನಗಾಗ್‌ನಲ್ಲಿ ಸ್ಥಿತಲಗೊಂಡವು. ಜೆರುಸಲೆಮ್ ನೆಲೆಯಿಲ್ಲದೆ ಹೋಯಿತು. ಆದರೂ ಹೀಬ್ರೂ ಭಾಷೆಯಲ್ಲಿ ಬೋಧನೆ ಮಾಡುವ ಮೂಲಕ ದೇವರ ಆಗಮನಕ್ಕೆ, ಸಂಕಷ್ಟದ ನಿವಾರಣೆಗೆ ಕಾತರದಿಂದ ಕಾದು ಕುಳಿತರು.

**ಸಾಮಾಜಿಕ ಸ್ಥಾನಮಾನ ಹಾಗೂ ಕಾನೂನು**

19ನೇ ಶತಮಾನದವರೆಗೆ ಯಹೂದಿಗಳಲ್ಲಿ ಸಾಮಾಜಿಕ ಮತ್ತು ಕಾನೂನಿನ ಸ್ಥಾನಮಾನಗಳಲ್ಲಿ ಯಾವುದೇ ಬದಲಾವಣೆಗಳು ಕಂಡುಬರಲಿಲ್ಲ. ಸಿನಗಾಗ್ (ಯಹೂದಿ ದೇವಾಲಯ)ಗಳನ್ನು ಹೊಸದಾಗಿ ನಿರ್ಮಿಸಲು ಮುಂದಾಗುವ ಮೂಲಕ ವಿಶೇಷ ತೆರಿಗೆಗಳನ್ನು ಸಂಗ್ರಹಿಸಿದರು. ಏಕೆಂದರೆ ಮುಸ್ಲಿಂ ಅಧಿಕಾರಿಗಳು ಮತ್ತು ಖಲೀಫರು ಪ್ರತ್ಯೇಕತೆಗೆ ಅಥವಾ ಅವರು ಪ್ಯಾಲೇಸ್ತೇನ್‌ನಲ್ಲಿ ನೆಲೆಸಲು ಅವಕಾಶ ನೀಡಲಿಲ್ಲ. ಜೊತೆಗೆ ಆಡಳಿತ, ನಿಯಮಗಳಲ್ಲಿ ಸ್ಥಾನಮಾನಗಳಲ್ಲಿ ಯಾವುದೇ ವಿನಾಯಿತಿ ನೀಡಲಿಲ್ಲ. ಮತ್ತು ಒಟ್ಟೋಮನ್ ಸಾಮ್ರಾಜ್ಯದಲ್ಲಿ ಕ್ರಿಶ್ಚಿಯನ್ನರಂತೆ ಯಹೂದಿಗಳ ಸಾಮಾಜಿಕ ಸ್ಥಾನಮಾನಗಳಿದ್ದವು. ಹಾಗೂ ಯುರೋಪಿಯನ್ ದೇಶಗಳು ಕೂಡ ಇವರ ಮೇಲಿನ ಹತ್ಯಾಕಾಂಡಕ್ಕೆ ಅನುಕಂಪ ತೋರಲಿಲ್ಲ.

ಖರಾಜ್ ಅಥವಾ ಜವಾಲಿ ಎಂದೂ ಕರೆಯಲ್ಪಡುವ ಜಜಿಯಾ ತಲೆಗಂದಾಯವನ್ನು ಅರಬ್ಬರು ಇವರ ಮೇಲೆ ಹೇರಿದ್ದರು. ಈ ತೆರಿಗೆ ಸ್ಥಳೀಯ ನಾಣ್ಯ ಪದ್ಧತಿಯಂತೆ 1:2:3 ಅನುಪಾತದಲ್ಲಿ ಸಂಗ್ರಹಿಸಲಾಗುತ್ತಿತ್ತು. 1855-56ರಲ್ಲಿ ಟರ್ಕಿಯಲ್ಲಿ ಸುಗ್ರಿವಾಜ್ಞೆ ತರುವ ಮೂಲಕ ಮುಸ್ಲಿಂಮೇತರರಿಗೆ ತಲೆಗಂದಾಯ, ಮತ್ತು ಮಿಲಿಟರಿ ಸೇವಾ ತೆರಿಗೆಯ ವಿನಾಯಿತಿಯನ್ನು ಬದಲಾಯಿಸಲಾಯಿತು. ಇದಕ್ಕೆ ಆಧಾರವಂತೆ 1857ರ ಟುನೇಷಿಯಾ ಸಂವಿಧಾನದಲ್ಲಿ ಜಜಿಯಾವನ್ನು ಉಲ್ಲೇಖಿಸಲಾಗಿದೆ. ಹಾಗೆಯೇ ಯುರೋಪಿಯನ್ ಬಣಗಳು ಮೊರೊಕೋದಲ್ಲಿ ನಡೆಸಿದ ಒಪ್ಪಂದಂತೆ ಕೆಲವು ವೈಯಕ್ತಿಕ ತೆರಿಗೆಗಳನ್ನು ತಿಳಿಸುತ್ತದೆ. 1909ರಲ್ಲಿ ಟರ್ಕಿ ಕ್ರಾಂತಿಯ ವೇಳೆ ಮುಸ್ಲಿಂಮೇತರರ ಮೇಲೆ ವಿಧಿಸುತ್ತಿದಂತಹ ನಿರ್ಬಂಧಗಳನ್ನು ಸಡಿಲಗೊಳಿಸಲಾಯಿತು. ಹೀಗಾಗಿ ಜುಡಾಯಿಸಂನ್ನು ಐತಿಹಾಸಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸಬಹುದು.

ಹೀಗೆ, ಪಶ್ಚಿಮ ಏಷ್ಯಾದಲ್ಲಿ ಯಹೂದಿಗಳ ಸಾಮಾಜಿಕ ಮತ್ತು ಆರ್ಥಿಕ ಜೀವನವು ಅಷ್ಟೇನೂ ಆಶಯದಾಯಕವಾಗಿರುವುದಿಲ್ಲ. ಮತ್ತೇ ಬಲಿಷ್ಠರಿಂದ ಪ್ರತಿ ಹಂತದಲ್ಲಿಯೂ ಕೂಡ

ಸಾಮಾಜಿಕವಾಗಿಯೂ ಕೂಡ ದಮನಕ್ಕೆ, ದೌರ್ಜನ್ಯಕ್ಕೆ ಮತ್ತು ತಾರತಮ್ಯಕ್ಕೆ ಹೆಚ್ಚಿನದಾಗಿಯೇ ಒಳಗಾಗಿದ್ದರು. ಬಹುಮುಖ್ಯವಾಗಿ ಈ ಜನಸಮುದಾಯವು ಯಾವುದೇ ಆರ್ಥಿಕ ಮೂಲಗಳನ್ನು ಹೊಂದದೇ ಇರುವುದೇ ಅವರ ದುಸ್ಥಿತಿಗೆ ಕಾರಣವಾಗಿರುತ್ತದೆ. ಈ ಜನವರ್ಗದವರು ಒಂದು ಅಬ್ರಹಾಮಿಕ್ ಏಕದೇವತಾವಾದ ಮತ್ತು ಜನಾಂಗೀಯ ಧರ್ಮವಾಗಿದ್ದು, ಯಹೂದಿ ಜನರ ಸಾಮೂಹಿಕ, ಸಾಂಸ್ಕೃತಿಕ ಮತ್ತು ಕಾನೂನು ಸಂಪ್ರದಾಯವೂ ಬಹುಮುಖ್ಯವಾಗಿ ನಾಗರಿಕತೆಯನ್ನು ಒಳಗೊಂಡಿರುತ್ತದೆ ಎಂದೇ ಹೇಳಬಹುದು.

## ಪರಾಮರ್ಶನ ಗ್ರಂಥಗಳು


1. Altmann, Nexander (ed.). **Studies in the 19th Century Jewish Intellectual History,** Cambridge, 1964.
2. Atiya Edward. **The Arabs,** London, 1955.
3. Allen henry, E. **The Turkish Transformation**, Chicago, 1935.
4. Butcher, E.L. **The Story of the Church of Egypt,** 2 Vols. London, 1897.
5. Browne, L.E. **The Eclipse of Christianity in Asia,** Cambridge, 1933.
6. Elbogen, Ismar. **A Century of Jewish Life**, Philadelphia, 1946